ಈ ದಿನ ದಿನಾಂಕಃ 19.08.2025 ರಂದು ಸಾಕ್ಷಿಯನ್ನು ಇಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**ಪಾಟೀಸವಾಲು ವಾದಿ ಪರ ಶ್ರೀ ವೈ ಎಂ ಆರ್ ವಕೀಲರಿಂದಃ**

ನಾನು ಎಸ್ ಎಸ್ ಎಲ್ ಸಿ ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ವಾದಿ ದಾವೆ ಸಲ್ಲಿಸಿರುವ ಆಸ್ತಿಯ ವಿಚಾರವನ್ನು ನಾನು ಕೇಳಿ ತಿಳಿದುಕೊಂಡಿರುತ್ತೇನೆ. ದಾವಾ ಷೆಡ್ಯೂಲ್ ಆಸ್ತಿ ಚೆಕ್ಕುಬಂದಿ ಹಾಗೂ ವಿಸ್ತೀರ್ಣವನ್ನು ನಾನು ಕೇಳಿ ತಿಳಿದುಕೊಂಡಿರುತ್ತೇನೆ. ದಾವಾ ಸ್ವತ್ತಿನ ಚೆಕ್ಕುಬಂದಿಯ ಒಳಗಿರುವ ಆಸ್ತಿಯ ಯಾವುದೇ ದಾಖಲೆ ನನ್ನ ಬಳಿ ಇಲ್ಲ ಎಂದರೆ ಸರಿ. ಪ್ರತಿವಾದ ಪತ್ರದಲ್ಲಿ ನುಡಿದಿರುವಂತೆ ರುಜುವಾತಿಸಲು ಯಾವುದೇ ದಾಖಲೆ ಇರುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಸರ್ವೆ ನಂ. 37 ರ ಆಸ್ತಿಗೆ ಸಂಬಂದಿಸಿದಂತೆ ದಾಖಲೆ ಇರುತ್ತದೆ ಎಂದು ನುಡಿಯುತ್ತಾರೆ. ಸರ್ವೆ ನಂ. 37 ರ ಆಸ್ತಿ ನನ್ನ ಹೆಸರಿನಲ್ಲಾಗಲೀ, ನನ್ನ ಸಹೋದರ, ಸಹೋದರಿ, ತಂದೆ ತಾಯಿ ಹೆಸರಿಗಾಗಲೀ ಇರುವ ಯಾವುದೇ ದಾಖಲೆ ಇರುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಸರ್ಕಾರಿ ಜಾಗ ಆಗಿರುವುದರಿಂದ ದಾಖಲೆ ಇರುವುದಿಲ್ಲವೆಂದು ನುಡಿಯುತ್ತಾರೆ. ಸರ್ವೆ ನಂ. 37 ರಲ್ಲಿ 400 ಎಕರೆ ಜಮೀನು ಅಸ್ಥಿತ್ವದಲ್ಲಿದೆ.

2. 1963 ನೇ ಸಾಲಿನಲ್ಲಿ ಸರ್ವೆ ನಂ. 37ರ 400 ಎಕರೆ ಜಮೀನ ಪೈಕಿ 2 ಎಕರೆ 10 ಗುಂಟೆ ಜಮೀನನ್ನು ನನ್ನ ಅಜ್ಜ ಅಂಗಡಿ ಹನುಮಪ್ಪನವರಿಗೆ ಸರ್ಕಾರ ಮಂಜೂರು ಮಾಡಿರುತ್ತದೆ. ಸದರಿ ಆಸ್ತಿ ಚಕ್ಕುಬಂದಿ ಪೂರ್ವಕ್ಕೆ ಕಾಡು, ಪಶ್ಚಿಮಕ್ಕೆ ದಾರಿ, ಉತ್ತರಕ್ಕೆ ಬುಸ್ಸೇನಹಳ್ಳಿ ತಿಮ್ಮಣ್ಣನವರ ತೋಟ ಹಾಗೂ ದಕ್ಷಿಣಕ್ಕೆ ಚನ್ನಪ್ಪಟ್ಟಿ ಶಿವಪ್ಪನವರ ತೋಟ ಇರುತ್ತದೆ. ಮಲ್ಲಿಗೆರೆ ಗ್ರಾಮದಿಂದ ದಕ್ಷಿಣ ದಿಕ್ಕಿಗೆ ಸುಮಾರು ½ ಕಿ ಮೀ ಅಂತರದಲ್ಲಿ ನನ್ನ ಅಜ್ಜನಿಗೆ ಮಂಜೂರಾದ ಆಸ್ತಿ ಅಸ್ಥಿತ್ವದಲ್ಲಿರುತ್ತದೆ. ವಾದಿಯ ಆಸ್ತಿಯ ಅಕ್ಕಪಕ್ಕದಲ್ಲಿ ನನ್ನ ಅಜ್ಜನಿಗೆ ಮಂಜೂರಾದ ಆಸ್ತಿ ಅಸ್ಥಿತ್ವದಲ್ಲಿಲ್ಲ ಎಂದರೆ ಸರಿ. ಸರ್ವೆ ನಂ. 37 ರಲ್ಲಿ ಮಂಜೂರು ಮಾಡಿ ಸರ್ಕಾರ ನಮಗೆ ಯಾವುದೇ ದಾಖಲೆ ನೀಡಿರುವುದಿಲ್ಲ ಎಂದರೆ ಸರಿ.

3. ವಾದಿ ಸಲ್ಲಿಸಿರುವ ದಾಖಲೆಗಳನ್ನು ವಕೀಲರ ಮೂಲಕ ಕೇಳಿ ತಿಳಿದುಕೊಂಡಿರುತ್ತೇನೆ. ದಿಃ 17.10.2011 ರಂದು ಪರ್ವತಪ್ಪನವರ ಹಿಸ್ಸೆಗೆ ದಾವಾ ಆಸ್ತಿ ವಿಭಾಗ ಪತ್ರದ ಮೂಲಕ ಬಂದಿರುತ್ತದೆ ಎಂದು ಸಂಗತಿಯನ್ನು ವಕೀಲರ ಮೂಲಕ ನಾನು ಕೇಳಿ ತಿಳಿದುಕೊಂಡಿರುತ್ತೇನೆ. ವಿಭಾಗ ಪತ್ರದಲ್ಲಿ ನಮೂದಿಸಿರುವ ಚೆಕ್ಕುಬಂದಿಯನ್ನು ಸಹ ನಾನು ಕೇಳಿ ತಿಳಿದುಕೊಂಡಿರುತ್ತೇನೆ ಆದರೆ ಚೆಕ್ಕುಬಂದಿ ಸುಳ್ಳಾಗಿರುತ್ತದೆ. ವಿಬಾಗ ಪತ್ರದಲ್ಲಿ ನಮೂದಿಸಿರುವ ಚೆಕ್ಕುಬಂದಿ ತಪ್ಪಾಗಿದೆ ಎದು ತೋರಿಸಲು ನಾನು ಯಾವುದೇ ದಾಖಲೆಯನ್ನು ನೋಡಿರುವುದಿಲ್ಲ. ಬದಲಾಗಿ ಅಳತೆ ಮಾಡುವ ಕಾಲಕ್ಕೆ ತಿಳಿದು ಬಂದಿರುತ್ತದೆ. ಅಳತೆ ಕಾರ್ಯ ನಿರ್ವಹಿಸಲು ಯಾರು ಯಾವಾಗ ಅರ್ಜಿ

ಸಲ್ಲಿಸಿರುತ್ತಾರೆಂದು ನನಗೆ ಗೊತ್ತಿಲ್ಲ. ಹಾಗಾಗಿ ಯಾರು ಅರ್ಜಿ ಸಲ್ಲಿಸಿ ಅಳತೆ ಕಾರ್ಯ ನಿರ್ವಹಿಸಿರುತ್ತಾರೆಂದರೆ ನನಗೆ ಗೊತ್ತಿಲ್ಲ ಎಂದರೆ ಸರಿ. ಬದಲಾವಣೆಯಾದ ದಾಖಲೆ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ ನನ್ನ ಸಮಕ್ಷಮ ಯಾವುದೇ ಅಳತೆ ಕಾರ್ಯ ನಿರ್ವಹಿಸಿರುವುದಿಲ್ಲ ಎಂದರೆ ಸರಿ. ನಾನು ತಕರಾರು ಮಾಡುತ್ತಿರುವ ಜಾಗಕ್ಕೆ ಸರ್ಕಾರದಿಂದ ಯಾವುದೇ ದಾಖಲೆ ಇರುವುದಿಲ್ಲ. ಪಂಚಾಯಿತಿ ಹಾಗೂ ಇತರೆ ಗ್ರಾಮಸ್ಥರು ನಾನು ತಕರಾರು ಮಾಡುತ್ತಿರುವ ಜಾಗಕ್ಕೆ ದಾಖಲೆಯನ್ನು ನೀಡಿರುವುದಿಲ್ಲ ಸಾಕ್ಷಿ ಮುಂದುವರೆದು ಸದರಿ ಸ್ಥಳವು ಲಕ್ಷ್ಮೀಸಾಗರ ಅರಣ್ಯಕ್ಕೆ ಸಂಬಂದ ಪಡುವುದರಿಂದ ನೀಡಿರುವುದಿಲ್ಲವೆಂದು ನುಡಿಯುತ್ತಾರೆ. ಅರಣ್ಯ ಇಲಾಖೆಗೆ ಸಂಬಂದ ಪಟ್ಟ ಅಧಿಕಾರಿಗಳು ಯಾವುದೇ ದಾಖಲೆ ನೀಡಿರುವುದಿಲ್ಲ ಎಂದರೆ ಸರಿ. ತಕರಾರು ಮಾಡುತ್ತಿರುವ ಸ್ಥಳ ಅರಣ್ಯ ಇಲಾಖೆಗೆ ಸಂಬಂದ ಪಟ್ಟಿರುತ್ತದೆ ಎಂದು ವಲಯ ಅರಣ್ಯಾಧಿಕಾರಿ ನೀಡಿರುತ್ತಾರೆ.

4. ನಿಡಿ 15 ರಲ್ಲಿ ಯಾವುದೇ ಚೆಕ್ಕುಬಂದಿ ಹಾಗೂ ವಿಸ್ತೀರ್ಣ ನಮೂದಾಗಿರುವುದಿಲ್ಲ ಎಂದರೆ ಸರಿ.ನಿಡಿ 15 ನ್ನು ದಾವೆಗಾಗಿ ಪಡೆದಿರುತ್ತೇನೆ ಎಂದರೆ ಸಾಕ್ಷಿಯು ತಕರಾರು ಸ್ಥಳ ಯಾರಿಗೆ ಸಂಬಂದ ಪಡುತ್ತದೆ ಎಂದು ನಾನು ಅರ್ಜಿ ಸಲ್ಲಿಸಿದಾಗ ನಿಡಿ 15 ನ್ನು ನೀಡಿರುತ್ತಾರೆಂದು ನುಡಿಯುತ್ತಾರೆ. ದಿಃ 27.08.2023 ರಂದು ನಾನು ಅರ್ಜಿ ಸಲ್ಲಿಸಿರುತ್ತೇನೆ. ಸದರಿ ಅರ್ಜಿ ನಕಲನ್ನು ನಾನು ವಕೀಲರಿಗೆ ನೀಡಿರುತ್ತೇನೆ. ಆ ದಾಖಲೆಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುವುದಿಲ್ಲ ಎಂದರೆ ಸರಿ.

5. ನಿಡಿ 15 ರಲ್ಲಿ ಸರ್ವೆ ನಂ. 37 ರ 400 ಎಕರೆ ಜಮೀನಿನ ಪೈಕಿ ನಮ್ಮ ಆಸ್ತಿ ಎಲ್ಲಿ ಬರುತ್ತದೆ ಎಂದು ನಮೂದಿಸಿರುವುದಿಲ್ಲ ಹಾಗೂ ಅಳತೆ ಮತ್ತು ಚೆಕ್ಕುಬಂದಿಯನ್ನು ಸಹ ನಮೂದಿಸಿರುವುದಿಲ್ಲ ಕೇವಲ ದಾವೆಗಾಗಿ ಅರಣ್ಯ ಇಲಾಖಾ ಅದಿಕಾರಿಗಳೊಂದಿಗೆ ಶಾಮಿಲ್ ಆಗಿ ಪಡೆದು ತಂದಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಕೋರಿಕೆಯ ಮೇರೆಗೆ ಹಿಂಬರಹವನ್ನು ಅರಣ್ಯ ಇಲಾಖೆಯವರು ನೀಡಿರುತ್ತಾರೆಂದರೆ ಸರಿ. ನಾನು ಮನೆ ಕಟ್ಟಿರುತ್ತೇನೆಂದು ನುಡಿಯುವ ಸ್ಥಳವು ಪಂಚಾಯಿತಿ ವ್ಯಾಪ್ತಿಗೆ ಬರುವುದಿಲ್ಲ ಎಂದರೆ ಸರಿ. ಹಾಗಾಗಿ ತಿಪ್ಪಗೊಂಡನಹಳ್ಳಿ ಪಂಚಾಯಿತಿ ಯಾವುದೇ ದಾಖಲೆ ನೀಡಿರುವುದಿಲ್ಲ ಎಂದರೆ ಸರಿ.

6. ನಿಡಿ 2 ರಿಂದ 14 ರಲ್ಲಿರುವ ಬಾವಚಿತ್ರಗಳಲ್ಲಿರುವ ಸ್ಥಳವನ್ನು ಗುರುತಿಸಲು ಯಾವುದೇ ದಾಖಲೆ ಸಲ್ಲಿಸಿರುವುದಿಲ್ಲ ಎಂದರೆ ಸರಿ. ನಿಡಿ 2 ರಿಂದ 14 ರಲ್ಲಿರುವ ಸ್ಥಳದ ಮಾಲೀಕತ್ವದ ದಾಖಲೆ ನನ್ನ ಹೆಸರಿನಲ್ಲಿಲ್ಲ ಎಂದರೆ ಸರಿ. ಸರ್ವೆ ನಂ. 37 ರ 400 ಎಕರೆ ಜಮೀನು ನಿಡಿ 1 ರಲ್ಲಿ ಹಳದಿ ಬಣ್ಣದಿಂದ ಗುರುತಿಸಿರುವ ಜಾಗದಲ್ಲಿ ಬರುತ್ತದೆ. ನಿಡಿ 1 ರಲ್ಲಿ ಸರ್ವೆ ನಂ. 37 ರ 400 ಎಕರೆ ಆಸ್ತಿಯ ವಿವರಣೆಯನ್ನು ನೀಡಿರುತ್ತಾರೆಯೇ ಎಂದರೆ ಸದರಿ ದಾಖಲೆಯಲ್ಲಿ ಕೊಟ್ಟಿರುವುದಿಲ್ಲ ಎಂದು ನುಡಿಯುತ್ತಾರೆ. ನಿಡಿ 1 ರಲ್ಲಿ ಹಳದಿ ಬಣ್ಣದಿಂದ ಗುರುತಿಸಿರುವ ಸ್ಥಳದ ಸುತ್ತಾಮುತ್ತಲು ಸರ್ವೆ ನಂ. 37 ಅಸ್ಥಿತ್ವದಲ್ಲಿಲ್ಲ ಎಂದರೆ ಸರಿಯಲ್ಲ. ನಿಡಿ 1 ರಲ್ಲಿ ಹಳದಿ ಬಣ್ಣದಿಂದ ಗುರುತಿಸಿರುವ ಸ್ಥಳ ಸರ್ವೆ ನಂ. 37 ಕ್ಕೆ ಸಂಬಂದ ಪಡುವುದಿಲ್ಲ ಎಂದರೆ ಸರಿ.

ಮುಂದುವರೆದ ಪಾಟೀಸವಾಲಿಗೆ ವಕೀಲರು ಕಾಲಾವಕಾಶ ಕೋರಿದ್ದರಿಂದ ಮುಂದುವರೆದ ಪಾಟೀಸವಾಲಿಗೆ ಕಾಲಾವಕಾಶ ನೀಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಪಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

Sd/-

C/c 2ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು

ಮತ್ತು ಜೆಎಂಎಫ್‌ಸಿ.ಚನ್ನಗಿರಿ.